ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803

ಅಂತರ್ಜಾಲ: www.kptcl.karnataka.gov.in
ಇ-ಮೇಲ್ ವಿಳಾಸ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿಸಿ025521**
ಕಂಪನಿ ಅಧಿಕೃತ ಕಛೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು 560 009

**ಕವಿಪ್ರನಿನಿ/ಬಿ100/24998/2021-22** **ದಿನಾಂಕ: 31.07.2021**

## ಸುತ್ತೋಲೆ

**ವಿಷಯ:** ಪ್ರಭಾರ ವ್ಯವಸ್ಥೆಯ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ಪ್ರತ್ಯಾಯೋಜಿಸಲಾದ ಅಧಿಕಾರಗಳ ಕುರಿತು

**ಉಲ್ಲೇಖ:**
1. ಪ್ರಧಾನ ಕಾರ್ಯದರ್ಶಿ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನೌಕರರ ಸಂಘ(659) ರವರ ಪತ್ರ ದಿನಾಂಕ:19.05.2021
2. ಪ್ರಧಾನ ವ್ಯವಸ್ಥಾಪಕರು(ಆ & ಮಾ.ಸಂ.), ಹುವಿಸಕಂ, ಹುಬ್ಬಳ್ಳಿ ರವರ ಪತ್ರ ಸಂಖ್ಯೆ: ಹೆಚ್.ಸಿ.ಓ-07/ಸಿ-95/2017-18 ದಿನಾಂಕ:26.04.2021
3. ರಿಟ್ ಮೇಲ್ಮನವಿ ಅರ್ಜಿ ಸಂಖ್ಯೆ: 480/2020 (ಬಿ. ಗುರುಮೂರ್ತಿ ಮತ್ತು ಇತರರು) ಪ್ರಕರಣದಲ್ಲಿ ಕರ್ನಾಟಕದ ಮಾನ್ಯ ಉಚ್ಛ ನ್ಯಾಯಾಲಯವು ನೀಡಿರುವ ಆದೇಶ ದಿನಾಂಕ: 13.11.2020
4. ಪ್ರಧಾನ ವ್ಯವಸ್ಥಾಪಕರು(ಆ & ಮಾ.ಸಂ.), ಗುವಿಸಕಂ, ಕಲಬುರಗಿ ರವರಿಗೆ ಸ್ಪಷ್ಟೀಕರಿಸಿ ಬರೆಯಲಾದ ಪತ್ರ ಸಂಖ್ಯೆ: ಕವಿಪ್ರನಿನಿ/ಬಿ22 /ಇತರೇ/2015-16, ದಿನಾಂಕ:06.03.2017
5. ನಿಗಮದ ಸುತ್ತೋಲೆ ಸಂಖ್ಯೆ: ಕವಿಪ್ರನಿನಿ/ಬಿ22/ಇತರೇ/2015-16 ದಿನಾಂಕ:20.09.2016

***

1. ರಿಟ್ ಮೇಲ್ಮನವಿ ಅರ್ಜಿ ಸಂಖ್ಯೆ: 480/2020(ಬಿ. ಗುರುಮೂರ್ತಿ ಮತ್ತು ಇತರರು) ಪ್ರಕರಣದಲ್ಲಿ ಕರ್ನಾಟಕದ ಮಾನ್ಯ ಉಚ್ಛ ನ್ಯಾಯಾಲಯವು ನೀಡಿರುವ ಆದೇಶ ದಿನಾಂಕ: 13.11.2020 ರಲ್ಲಿ ವಿಧಿಸಿರುವ ಷರತ್ತುಗಳಿಗೊಳಪಟ್ಟು, ಪ್ರಭಾರ ವ್ಯವಸ್ಥೆಯನ್ನು ಜಾರಿಗೊಳಿಸಲು ನಿರ್ದೇಶನ ನೀಡಿರುವುದರಿಂದ, ಕವಿಪ್ರನಿನಿ ಹಾಗೂ ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಹಲವಾರು ಹುದ್ದೆಗಳು ದೀರ್ಘಾವಧಿಯಿಂದ ಖಾಲಿ ಇದ್ದು, ಆಡಳಿತಾತ್ಮಕ ಹಿತದೃಷ್ಟಿಯಿಂದ, ಉಲ್ಲೇಖಿತ ತೀರ್ಪಿನಲ್ಲಿ ವಿಧಿಸಲಾದ ಷರತ್ತುಗಳಿಗೆ ಒಳಪಟ್ಟು ನಿಗಮದ ಅಧಿಸೂಚನೆಗಳಲ್ಲಿ ವಿವಿಧ ಪದವೃಂದಗಳ ಅಧಿಕಾರಿಗಳಿಗೆ ಉನ್ನತ ಹುದ್ದೆಯಲ್ಲಿ, ಪ್ರಭಾರ ವ್ಯವಸ್ಥೆ ಆಧಾರದ ಮೇಲೆ ಕಾರ್ಯನಿರ್ವಹಿಸಲು ಆದೇಶಿಸಲಾಗಿದೆ.

ಮೇಲೆ ತಿಳಿಸಿರುವಂತೆ, ಪ್ರಭಾರ ವ್ಯವಸ್ಥೆಯ ಮೇರೆಗೆ ವರದಿ ಮಾಡಿಕೊಂಡಿರುವ ಅಧಿಕಾರಿಗಳು, ಸದರಿ ಹುದ್ದೆಗಳ ಕಾನೂನು ಬದ್ಧ ಅಧಿಕಾರಗಳನ್ನು ಚಲಾಯಿಸಲು ಹಾಗೂ ಸಂಬಂಧಿಸಿದ ಕಾರ್ಯ ನಿರ್ವಹಣೆ ಮಾಡುವ ಕುರಿತಂತೆ ಸ್ಪಷ್ಟೀಕರಣ ನೀಡುವಂತೆ ವಿವಿಧ ಕಛೇರಿಗಳಿಂದ ಕೋರಲಾಗುತ್ತಿದೆ. ಈ ವಿಷಯವನ್ನು ನಿಗಮವು ಪರಿಶೀಲಿಸಿದೆ.

ಪ್ರಸ್ತುತ, ಕರ್ನಾಟಕದ ಮಾನ್ಯ ಉಚ್ಛ ನ್ಯಾಯಾಲಯವು ರಿಟ್ ಮೇಲ್ಮನವಿ ಅರ್ಜಿ ಸಂಖ್ಯೆ: 480/2020 (ಬಿ. ಗುರುಮೂರ್ತಿ ಮತ್ತು ಇತರರು) ಪ್ರಕರಣದಲ್ಲಿ ನೀಡಿರುವ ದಿನಾಂಕ: 13.11.2020 ರ ಆದೇಶದ ಕಂಡಿಕೆ 36 ರ ಉಪ-ಕಂಡಿಕೆ ಬಿ ರಲ್ಲಿ ಈ ಕೆಳಗಿನಂತೆ ತಿಳಿಸಲಾಗಿರುತ್ತದೆ.

'.... (b) *The employees placed on in-charge arrangement shall not have any right of lien to the posts in question. They can, however, **exercise substantive functions** of the said posts, having regard to the interest of administration.'*

ಸದರಿ ರಿಟ್ ಮೇಲ್ಮನವಿಯ ಆದೇಶದಲ್ಲಿ ತಿಳಿಸಿರುವಂತೆ, ನಿಗಮದಲ್ಲಿ ಪ್ರಭಾರ ವ್ಯವಸ್ಥೆ ಕಲ್ಪಿಸಿ ಜಾರಿಗೊಳಿಸಲಾದ ಅಧಿಸೂಚನೆಯ ಕ್ರಮ ಸಂಖ್ಯೆ 2 ರಲ್ಲಿ ಈ ಕೆಳಗಿನಂತೆ ನಮೂದಿಸಲಾಗಿರುತ್ತದೆ.

*'ಪ್ರಭಾರ ವ್ಯವಸ್ಥೆಯಲ್ಲಿ ಸ್ಥಳನಿಯುಕ್ತಿಗೊಂಡ ಅಧಿಕಾರಿಗಳು ಸದರಿ ಹುದ್ದೆಗಳ ಮೇಲೆ ಯಾವುದೇ ಹಕ್ಕನ್ನು ಹೊಂದಿರುವುದಿಲ್ಲ. ಆದರೆ, ಸದರಿ ಅಧಿಕಾರಿಗಳು ನಿಗಮದ ಆಡಳಿತಾತ್ಮಕ ಹಿತದೃಷ್ಟಿಯಿಂದ ಪ್ರಸ್ತುತ ಹುದ್ದೆಯ ಪ್ರಮುಖ ಮತ್ತು ಪ್ರಖ್ಯಾಯಿತ ಕರ್ತವ್ಯಗಳನ್ನು ನಿರ್ವಹಿಸಬಹುದಾಗಿರುತ್ತದೆ.'*

ಮೇಲೆ ತಿಳಿಸಲಾದ ರಿಟ್ ಮೇಲ್ಮನವಿ ಅರ್ಜಿ ಸಂಖ್ಯೆ: 480/2020 (ಬಿ. ಗುರುಮೂರ್ತಿ ಮತ್ತು ಇತರರು) ಪ್ರಕರಣದಲ್ಲಿ ಕರ್ನಾಟಕದ ಮಾನ್ಯ ಉಚ್ಛ ನ್ಯಾಯಾಲಯವು ದಿನಾಂಕ: 13.11.2020 ರಂದು ನೀಡಿರುವ ಆದೇಶದ ಅನ್ವಯ ಷರತ್ತುಗಳಿಗೆ ಒಳಪಟ್ಟು ಪ್ರಭಾರ ವ್ಯವಸ್ಥೆ ಆಧಾರದ ಮೇಲೆ ಕಾರ್ಯನಿರ್ವಹಿಸಲು ಆದೇಶಿಸಿದ/ಆದೇಶಿಸುವ ಅಧಿಸೂಚನೆಗಳನ್ವಯ ಉನ್ನತ ಹುದ್ದೆಯಲ್ಲಿ ಕಾರ್ಯಭಾರವನ್ನು ವಹಿಸಿಕೊಂಡ/ವಹಿಸಿಕೊಳ್ಳುವ ಅಧಿಕಾರಿಗಳು ಮಾತ್ರ ಪ್ರಸ್ತುತ ಹೊಂದಿದ ಹುದ್ದೆಯ ಎಲ್ಲಾ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಆಡಳಿತಾತ್ಮಕ ಹಿತದೃಷ್ಟಿಯಿಂದ ನಿರ್ವಹಿಸ ಬಹುದಾಗಿರುತ್ತದೆ ಎಂದು ಸ್ಪಷ್ಟೀಕರಿಸಿದೆ.

2. ಆದಾಗ್ಯೂ, ಈ ಹಿಂದೆ, ಪ್ರಧಾನ ವ್ಯವಸ್ಥಾಪಕರು (ಆ&ಮಾ.ಸಂ.ಅ) ಗುವಿಸಕಂ, ಕಲಬುರಗಿ ರವರು ಕೆಲವು ಹುದ್ದೆಗಳಲ್ಲಿ ಪ್ರಭಾರಿ (Incharge) ಅಧೀಕ್ಷಕ ಇಂಜಿನಿಯರ್(ವಿ) ಕಾರ್ಯನಿರ್ವಹಿಸುತ್ತಿದ್ದು, ರೆಗ್ಯುಲರ್ ಅಧೀಕ್ಷಕ ಇಂಜಿನಿಯರ್(ವಿ) ರವರು ವರದಿ ಮಾಡಿಕೊಳ್ಳುವ ವರೆಗೆ ಕವಿಮಂ ನೌಕರರ(ವ.ಶಿ.ನಿ ಮತ್ತು ಮೇ) ನಿಬಂಧನೆಗಳು-1987ರ ಅನ್ವಯ ಕ್ರಮಗಳನ್ನು ಜರುಗಿಸುವ ಬಗ್ಗೆ ಸ್ಪಷ್ಟೀಕರಣವನ್ನು ಕೋರಿದ ಸಂಧರ್ಭದಲ್ಲಿ ದಿನಾಂಕ:06.03.2017ರ ಪತ್ರದಲ್ಲಿ ಈ ಕೆಳಗಿನಂತೆ ಸ್ಪಷ್ಟೀಕರಿಸಲಾಗಿತ್ತು.

*'ನಿಗಮದ ಅಧಿಕಾರಿ/ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಕವಿಮಂ ನೌಕರರ(ವ.ಶಿ.ನಿ ಮತ್ತು ಮೇ) ನಿಬಂಧನೆಗಳು-1987ರ ಶೆಡ್ಯೂಲ್‌ಗಳಲ್ಲಿ ತಿಳಿಸಿರುವ ಹುದ್ದೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ಅಧಿಕಾರ ಇರುತ್ತದೆ ಹೊರತು ಪ್ರಭಾರ ಅಧಿಕಾರಿಗಳಗಳಿಗೆ ಅಧಿಕಾರ ಇರುವುದಿಲ್ಲ ಎಂದು ತಿಳಿಸಿ ಒಂದು ವೇಳೆ ಶಿಸ್ತು ಕ್ರಮ ಕೈಗೊಳ್ಳುವ ಪ್ರಸಂಗ ಬಂದಲ್ಲಿ ಅದನ್ನು ತಕ್ಷಣದ ಮೇಲಾಧಿಕಾರಿಗಳಿಗೆ ರವಾನಿಸಬಹುದಾಗಿರುತ್ತದೆಯೇ ಹೊರತು ಪ್ರಭಾರದಲ್ಲಿರುವ ಅಧಿಕಾರಿಗಳಿಗೆ ಅಧಿಕಾರ ನೀಡಲು ಸಾಧ್ಯವಿರುವುದಿಲ್ಲ.'*

3. ಆದ್ದರಿಂದ, ಕಂಡಿಕೆ 1 ರಲ್ಲಿ ವಿವರಿಸಿರುವಂತೆ, ಪ್ರಭಾರ ವ್ಯವಸ್ಥೆ ಆಧಾರದ ಮೇಲೆ ಕಾರ್ಯನಿರ್ವಹಿಸಲು ಆದೇಶಿಸಿದ/ಆದೇಶಿಸುವ ಅಧಿಸೂಚನೆಗಳನ್ವಯ ಉನ್ನತ ಹುದ್ದೆಯಲ್ಲಿ ಕಾರ್ಯಭಾರವನ್ನು ವಹಿಸಿಕೊಂಡ/ವಹಿಸಿಕೊಳ್ಳುವ ಅಧಿಕಾರಿಗಳು ಮಾತ್ರ ಆ ಹುದ್ದೆಯ ಎಲ್ಲಾ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ಆಡಳಿತಾತ್ಮಕ ಹಿತದೃಷ್ಟಿಯಿಂದ ನಿರ್ವಹಿಸಬಹುದಾಗಿರುತ್ತದೆ.

4. ಮುಂದುವರೆದು, ಉಳಿದ ಪ್ರಭಾರ ವ್ಯವಸ್ಥೆ ಪ್ರಕರಣಗಳಲ್ಲಿ (ಉದಾಹರಣೆಗೆ:ರಜೆ/ತರಬೇತಿ /ಅಮಾನತ್ತು/ನಿವೃತ್ತಿ/ವರ್ಗಾವಣೆ/ಪದೋನ್ನತಿಯಿಂದ ಹುದ್ದೆ ತೆರವಾದ ಸಂದರ್ಭಗಳಲ್ಲಿ) ಮೇಲಿನ ಕಂಡಿಕೆ 2 ರಲ್ಲಿ ಸ್ಪಷ್ಟೀಕರಿಸಿರುವಂತೆ, ಕ.ವಿ.ಮಂ ನೌಕರರ(ವರ್ಗೀಕರಣ ಶಿಸ್ತು ನಿಯಂತ್ರಣ ಮತ್ತು ಮೇಲ್ಮನವಿ)ನಿಬಂಧನೆಗಳು-1987ರ ಅನ್ವಯ ಕ್ರಮಗಳನ್ನು ಜರುಗಿಸುವ ಅಧಿಕಾರಗಳನ್ನು ಹೊರತುಪಡಿಸಿ, ಉಳಿದ ಎಲ್ಲಾ ಅಧಿಕಾರಗಳನ್ನು ಮತ್ತು ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಎಂದು ಸ್ಪಷ್ಟೀಕರಿಸಿದೆ.

'ವ್ಯವಸ್ಥಾಪಕ ನಿರ್ದೇಶಕರಿಂದ
ಅನುಮೋದಿಸಲ್ಪಟ್ಟಿದೆ'

**ನಿರ್ದೇಶಕರು(ಆಡಳಿತ ಮತ್ತು ಮಾ.ಸಂ)**
**ಕವಿಪ್ರನಿನಿ**

<u>ಪ್ರತಿಗಳು</u>

1. ವ್ಯವಸ್ಥಾಪಕ ನಿರ್ದೇಶಕರು, ವಿಸಕಂಗಳು/ ಪಿಸಿಕೆಎಲ್
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ವಿಸಕಂಗಳು
3. ಎಲ್ಲಾ ಆರ್ಥಿಕ ಸಲಹೆಗಾರರು; ಕವಿಪ್ರನಿನಿ/ ವಿಸಕಂಗಳು
4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ ವಿಸಕಂಗಳು
5. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಹಣಕಾಸು)/(ಪ್ರಸರಣ)/(ಆ. ಮತ್ತು ಮಾ.ಸಂ), ಕವಿಪ್ರನಿನಿ, ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು

<u>ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ www.kptcl.karnataka.gov.in-->eprasarana ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ.</u>

1. ಎಲ್ಲಾ ಅಧೀಕ್ಷಕ ಇಂಜಿನಿಯರ್/ ನಿಯಂತ್ರಣಾಧಿಕಾರಿ, ಕವಿಪ್ರನಿನಿ/ ವಿಸಕಂಗಳು
2. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್/ ಉಪ ಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ/ವಿಸಕಂಗಳು
3. ನಿಗಮ ಕಾರ್ಯಾಲಯದ ಎಲ್ಲಾ ಅಧಿಕಾರಿಗಳು/ ಎಲ್ಲಾ ಲೆಕ್ಕಾಧಿಕಾರಿಗಳು(ಆಂ.ಪ.), ಕವಿಪ್ರನಿನಿ, ವಿಸಕಂಗಳು

<u>ಪ್ರತಿಗಳು ಮಾಹಿತಿಗಾಗಿ:</u>

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ(ನೋ.ಸಂ.659)& ನಿರ್ದೇಶಕರು ಕವಿಪ್ರನಿನಿ & ವಿಸಕಂಗಳು.
2. ಶ್ರೀ.ಟಿ.ಎಂ.ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜನಿಯರುಗಳ ಸಂಘ, ನಿರ್ದೇಶಕರು, ಕವಿಪ್ರನಿನಿ ಮತ್ತು ವಿಸಕಂಗಳು
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜನಿಯರುಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಘ, ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮ ಇಂಜಿನಿಯರ್‌ಗಳ ಸಂಘ, ಕೆ.ಆರ್.ವೃತ್ತ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ವಿಸಕಂಗಳು ಪ.ಜಾ./ ಪ.ಪಂ. ಅಧಿಕಾರಿಗಳ ಸಂಘ, ಬೆಂಗಳೂರು.